ದಿಃ 27-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಟಿ.ಕೆ.ವಿ **1** ಮತ್ತು **2** ನೇ ಪ್ರತಿವಾದಿ ಪರ ವಕೀಲರಿಂದಃ

ಕರಾರು ಪತ್ರಕ್ಕೆ ನಾನು ಸಹಿ ಮಾಡಿದಾಗ ಸಮಯವು ಮಧ್ಯಾಹ್ನ 01.30 ಗಂಟೆಯಾಗಿತ್ತು. ಆ ಸಮಯದಲ್ಲಿ ನನ್ನೊಂದಿಗೆ ನಾರಾಯಣಪ್ಪ, ಅಂಜಿನಪ್ಪ, ನರಸಿಂಹಲು, ರತ್ನಮ್ಮ ಮತ್ತು ಸುಬ್ಬರಾಯಪ್ಪರವರು ಇದ್ದರು. ಆ ಸಮಯದಲ್ಲಿ ನನ್ನೊಂದಿಗೆ 6 ಜನರು ಇದ್ದರು. ಆ ದಿನ ನಾನು ನಿಪಿ-1 ರ ಕರಾರು ಪತ್ರವನ್ನು ಓದಲಿಲ್ಲ. ನಿಪಿ-1 ನ್ನು ಬರೆದ ಚಾಪಾ ಕಾಗದವನ್ನು ವಾದಿಯು ತಂದಿದ್ದರು. ನಿಪಿ-1 ರ ಕರಾರು ಪತ್ರವನ್ನು ಆ ದಿನ ಕೈಯಲ್ಲಿ ಬರೆಯಲಾಯಿತು. ನಿಪಿ-1 ನ್ನು ಬರೆದ ದಿನಾಂಕ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಿಪಿ-1 ನ್ನು 2006 ರಲ್ಲಿ ಬರೆಯಲಾಯಿತು ಎಂದು ನುಡಿಯುತ್ತಾರೆ. ವಾದಿ ಹಾಗೂ ನಿಮ್ಮ ಮಧ್ಯೆ ವಿಶ್ವಾಸ ಚೆನ್ನಾಗಿದೆ ಎಂದರೆ ಸಾಕ್ಷಿ ವಾದಿಯು ನಮ್ಮ ಊರಿನವರು ಎಂದು ನುಡಿಯುತ್ತಾರೆ. ನನ್ನನ್ನು ಹೊರತುಪಡಿಸಿ ಆ ದಿನ ನಾರಾಯಣಪ್ಪರವರು ಸಹಿ ಮಾಡಿರುತ್ತಾರೆ. ನಮ್ಮಿಬ್ಬರನ್ನು ಹೊರತುಪಡಿಸಿ ಕರಾರು ಪತ್ರಕ್ಕೆ ಬೇರೆ ಯಾರೂ ಸಹ ಆ ದಿನ ಸಹಿ ಮಾಡಲಿಲ್ಲ. ಕರಾರು ಪತ್ರವನ್ನು ಬರೆದ ದಿನದಂದು ಸ್ವತ್ತಿನ ಪಹಣಿಯನ್ನು ನಾನು ನೋಡಲಿಲ್ಲ. ಆ ದಿನ ಎಷ್ಟು ಗುಂಟೆಗಳು ಯಾರ ಹೆಸರಿನಲ್ಲಿತ್ತು ಎಂದು ತಿಳಿದುಕೊಂಡಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ಆ ದಿನ 20 ಗುಂಟೆ ಜಮೀನು 1 ನೇ ಪ್ರತಿವಾದಿಯಾದ ಸುಬ್ಬರಾಯಪ್ಪರವರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪಹಣಿಯು ಈಗ ಯಾರ ಹೆಸರಿನಲ್ಲಿದೆ ಎಂಬುದನ್ನು ನಾನು ತಿಳಿದುಕೊಂಡಿಲ್ಲ. ನಾನು ಯಾವುದೇ ದಾಖಲೆಗೆ ಸಹಿ ಮಾಡದಿದ್ದರೂ ವಾದಿಗೆ ಸಹಾಯ ಮಾಡಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಸೃಷ್ಠಿ ಮಾಡಿರುವ ನಿಪಿ-1 ರ ಕರಾರು ಪತ್ರಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕರಾರು ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು